# ನಗರಸಭಾ ಕಾರ್ಯಾಲಯ, ತುಮಕೂರು.

ನಂ.ನಸತು/ತಾಂಶಾ/ಟೆಂಡರ್/ಸಿಆರ್/93/2009-10 ದಿನಾಂಕ: 30-10-2009.

## ಟೆಂಡರ್ ಪ್ರಕಟಣೆ

ತುಮಕೂರು ನಗರ ಅಭಿವೃದ್ದಿಗಾಗಿ ನಗರಸಭಾ ಅನುದಾನದ ಅಡಿಯಲ್ಲಿ ಕಾಮಗಾರಿಯನ್ನು ನಿರ್ವಹಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿನ ಪಾರದರ್ಶಕತೆಯ ಆಧ್ಯಾದೇಶ 2000 ರಂತೆ ಸ್ಟಾಂಡರ್ಡ್ ಟೆಂಡರ್ಸ್ ಡಾಕ್ಯುಮೆಂಟ್‌ನ ಸೂಚನೆ ಮತ್ತು ನಿಬಂಧನೆಗೊಳಪಟ್ಟಂತೆ ಅರ್ಹ ದರ್ಜೆಯ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿಸಿದ ಗುತ್ತಿಗೆದಾರರುಗಳಿಂದ ನಿಗದಿಪಡಿಸಿದ ನಮೂನೆಗಳಲ್ಲಿ ಮೊಹರು ಮಾಡಲಾದ ಲಕೋಟೆಯ ಮೇಲೆ ಕಾಮಗಾರಿಯ ಹೆಸರನ್ನು ನಮೂದಿಸಿದ **ಶೇಕಡವಾರು / ಐಟಂವಾರು ಟೆಂಡರ್‌ಗಳನ್ನು** ದ್ವಿಪತ್ರಿಯಲ್ಲಿ ಪೌರಾಯುಕ್ತರು, ನಗರಸಭೆ, ತುಮಕೂರು ಇವರಿಗೆ ಸಲ್ಲಿಸಲು ಆಹ್ವಾನಿಸಲಾಗಿದೆ.

1) ಟೆಂಡರ್ ಫಾರಂಗಳನ್ನು ನೀಡುವ **ದಿನಾಂಕ 16-11-2009** ರವರಗೆಗೆ ಕಛೇರಿಯ ವೇಳೆಯಲ್ಲಿ ಟೆಂಡರ್ ಶುಲ್ಕ ಪಾವತಿಸಿದ ಅರ್ಹ ಗುತ್ತಿಗೆದಾರರಿಗೆ ನೀಡಲಾಗುವುದು.

2) ಭರ್ತಿ ಮಾಡಿದ ಫಾರಂಗಳನ್ನು **ದಿನಾಂಕ 18-11-2009 ರಂದು 4.30 ಗಂಟೆಯೊಳಗಾಗಿ** ಪೌರಾಯುಕ್ತರು, ನಗರಸಭೆ, ತುಮಕೂರು ರವರ ಕೊಠಡಿಯಲ್ಲಿ ಇಟ್ಟಿರುವ ಟೆಂಡರ್ ಬಾಕ್ಸ್‌ನಲ್ಲಿ ಅಥವಾ ಮಾನ್ಯ ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ, ತುಮಕೂರು ರವರ ಕಛೇರಿಯ ಟೆಂಡರ್ ಬಾಕ್ಸ್‌ನಲ್ಲಿ ಹಾಕಬಹುದಾಗಿದೆ.

**3) ಸಲ್ಲಿಸಲಾಗಿರುವ ಟೆಂಡರ್‌ಗಳನ್ನು ಸಾಧ್ಯವಾದರೆ ದಿನಾಂಕ 18-11-2009 ರಂದು 4.45** ಗಂಟೆಗೆ ಹಾಜರಿರುವ ಗುತ್ತಿಗೆದಾರರ ಸಮ್ಮುಖದಲ್ಲಿ ತೆರೆಯಲಾಗುವುದು. ಅಥವಾ ಕಛೇರಿ ವೇಳೆಯಲ್ಲಿ ಹಾಜರಿರುವ ಗುತ್ತಿಗೆದಾರರ ಸಮ್ಮುಖದಲ್ಲಿ ತೆರೆಯಲಾಗುವುದು.

4) ಹೆಚ್ಚಿನ ಮಾಹಿತಿಗಾಗಿ ವೆಬ್‌ಸೈಟ್: www.tumkurcity.gov.in ಹಾಗೂ ನಗರಸಭೆ ತಾಂತ್ರಿಕ ಶಾಖೆಯಲ್ಲಿ ಕಛೇರಿ ವೇಳೆಯಲ್ಲಿ ಪಡೆಯಬಹುದು.

| ಕ್ರ.ಸಂ. | ಕಾಮಗಾರಿ ಹೆಸರು | ಅಂದಾಜು ಮೊತ್ತ (ಲಕ್ಷಗಳಲ್ಲಿ) | ಇಎಂಡಿ ಮೊತ್ತ ರೂಗಳಲ್ಲಿ | ಟೆಂಡರ್ ಫಾರಂ ಬೆಲೆ | ಗುತ್ತಿಗೆದಾರರು | ಕಾಲಾವಧಿ |
|---|---|---|---|---|---|---|
| 1 | ತುಮಕೂರು ನಗರಸಭಾ ವ್ಯಾಪ್ತಿಗೆ ಪ್ಯಾನಲ್ ಬೋರ್ಡ್‌ಗಳನ್ನು ಸರಬರಾಜು ಮಾಡಿ ಅಳವಡಿಸುವುದು. | 6.25 | 15625.00 | 500+ ತೆರಿಗೆ | 3ನೇ ದರ್ಜೆ ಮತ್ತು ಮೇಲ್ಪಟ್ಟು | 30 ದಿನಗಳು |
| 2 | ವಾರ್ಡ್ ನಂ. 4 ರಲ್ಲಿ ಬಿಟ್ಟು ಹೋಗಿರುವ ಯುಜಿಡಿ ಕೊಳವೆ ಮಾರ್ಗಗಳನ್ನು ಲಿಂಕ್ ಮಾಡುವುದು. | 4.00 | 10000.00 | 500+ ತೆರಿಗೆ | 3ನೇ ದರ್ಜೆ ಮತ್ತು ಮೇಲ್ಪಟ್ಟು | 30 ದಿನಗಳು |
| 3 | ಮಂಡಿಪೇಟೆ ಪ್ರದೇಶದಲ್ಲಿ ಹಾಲಿ ಇರುವ ಚರಂಡಿ ಮೇಲಿನ ಕಲ್ಲನ್ನು ತೆಗೆದು ಶೀಲ್ಟ್ ತೆಗೆದು ಯಥಾಸ್ಥಿತಿಗೆ ಅಳವಡಿಸುವುದು. | 5.00 | 12500.00 | 500+ ತೆರಿಗೆ | 3ನೇ ದರ್ಜೆ ಮತ್ತು ಮೇಲ್ಪಟ್ಟು | 20 ದಿನಗಳು |
| 4 | ವಾರ್ಡ್ ನಂ. 35 ರಲ್ಲಿ ಪೈಪ್‌ಲೈನ್ ಅಳವಡಿಸುವುದು. | 0.50 | 1250.00 | 250+ ತೆರಿಗೆ | 3ನೇ ದರ್ಜೆ ಮತ್ತು ಮೇಲ್ಪಟ್ಟು | 10 ದಿನಗಳು |
| 5 | ವಾರ್ಡ್ ನಂ. 3ರಲ್ಲಿ ಯುಜಿಡಿ ಫಿಟ್ ನಿರ್ಮಾಣ, ಮ್ಯಾನ್‌ಹೋಲ್ ನಿರ್ಮಾಣ | 10.00 | 25000.00 | 1000+ ತೆರಿಗೆ | 3ನೇ ದರ್ಜೆ ಮತ್ತು ಮೇಲ್ಪಟ್ಟು | 30 ದಿನಗಳು |

## ಷರತ್ತುಗಳು

1. ಟೆಂಡರ್ ಫಾರಂ ಬೆಲೆಯನ್ನು ನಗದಾಗಿ ನಗರಸಭೆಯ ನಗದು ಶಾಖೆಯಲ್ಲಿ ಪಾವತಿಸಿ ಅರ್ಜಿ ಸಲ್ಲಿಸಬಹುದಾಗಿದೆ. ಅರ್ಜಿಯನ್ನು ಸಲ್ಲಿಸುವಾಗ ಲೋಕೋಪಯೋಗಿ ಇಲಾಖೆಯಲ್ಲಿ ಅರ್ಹ ದರ್ಜೆ ನೊಂದಾಯಿತರಾಗಿರುವ ಬಗ್ಗೆ ಪ್ರಮಾಣ ಪತ್ರವನ್ನು ಹಾಜರುಪಡಿಸಿ ದಾಖಲಾತಿ ಮುಸ್ತಕ (ಪಾಸ್ ಬುಕ್)ದಲ್ಲಿ ದಾಖಲಾತಿ ಮಾಡಿಸಿಕೊಳ್ಳಬೇಕು.
2. ಇಎಂಡಿ ಹಣವನ್ನು ಪೌರಾಯುಕ್ತರು, ನಗರಸಭೆ, ತುಮಕೂರು ಇವರ ಹೆಸರಿಗೆ ಜಮಾ ಮಾಡಬಹುದಾದಂತಹ ಡಿಡಿ / ಎಫ್‌ಡಿಆರ್‌ಗಳನ್ನು ಅಥವಾ ನಗರಸಭಾ ಕಾರ್ಯಾಲಯದಲ್ಲಿ ಜಮಾ ಮಾಡಿ ರಸೀದಿಯೊಂದಿಗೆ ಟೆಂಡರ್ ಜೊತೆಯಲ್ಲಿ ಸಲ್ಲಿಸಬೇಕು.
3. ಟೆಂಡರ್ ಫಾರಂನಲ್ಲಿ ದರವನ್ನು ಅಂಕಿ ಮತ್ತು ಅಕ್ಷರಗಳಲ್ಲಿ ಸ್ಪಷ್ಟವಾಗಿ ನಮೂದಿಸಬೇಕು.

4. ಮೇಲೆ ನಿಗಧಿಪಡಿಸಿರುವ ಯಾವುದೇ ದಿನಾಂಕಗಳು ಸರ್ಕಾರಿ ರಜಾ ದಿನಗಳೆಂದು ಘೋಷಿಸಲ್ಪಟ್ಟಲ್ಲಿ ಮುಂದಿನ ಕೆಲಸದ ದಿನವನ್ನು ಪರಿಗಣಿಸಲಾಗುವುದು.
5. ನಿಬಂಧನೆಗಳನ್ನು ನಮೂದಿಸಿ ಸಲ್ಲಿಸುವ ಟೆಂಡರ್‌ಗಳನ್ನು ತಿರಸ್ಕರಿಸಲಾಗುವುದು.
6. ಯಾವ ಕಾರಣವನ್ನು ಸಹ ನೀಡದೆ ಯಾವುದೇ ಅಥವಾ ಎಲ್ಲಾ ಟೆಂಡರ್‌ಗಳನ್ನು ತಿರಸ್ಕರಿಸುವ ಅಧಿಕಾರವನ್ನು ನಗರಸಭೆ ಕಾಯ್ದಿರಿಸಿಕೊಂಡಿದೆ.
7. ಮೇಲಿನ ಕಾಮಗಾರಿಯಲ್ಲಿ ಏನಾದರೂ ಸೇರ್ಪಡೆ ಅಥವಾ ಮಾರ್ಪಡಿಸುವ ಹಕ್ಕನ್ನು ನಗರಸಭೆ ಕಾಯ್ದಿರಿಸಿಕೊಂಡಿದೆ.
8. ಕಾಮಗಾರಿಗೆ ಬೇಕಾದ ಎಲ್ಲಾ ಸಾಮಗ್ರಿಗಳನ್ನು ಗುತ್ತಿಗೆದಾರರೇ ಒದಗಿಸಿಕೊಳ್ಳತಕ್ಕದ್ದು.
9. ಟೆಂಡರ್ ಫಾರಂಗಳನ್ನು ಪಡೆಯುವ ಸಂದರ್ಭದಲ್ಲಿ ಮತ್ತು ಟೆಂಡರ್ ಸಲ್ಲಿಸುವ ಸಮಯದಲ್ಲಿ ಪಾಸ್ ಬುಕ್‌ನಲ್ಲಿ ರೆಕಾರ್ಡ್ ಮಾಡಿಸಿಕೊಳ್ಳಬೇಕು.
10. ಗುತ್ತಿಗೆದಾರರು ಟೆಂಡರ್ ಸಲ್ಲಿಸುವಾಗ 'ಬಿ' ಷೆಡ್ಯೂಲ್‌ನಲ್ಲಿ ದರಗಳನ್ನು ನಮೂದಿಸುವಾಗ ಸ್ಪಷ್ಟವಾಗಿ ಒಂದೇ ರೀತಿಯ ಬರವಣಿಗೆಯಲ್ಲಿ ಪ್ರತಿ ಪುಟಕ್ಕೂ ಸಹಿಯೊಂದಿಗೆ ಯಾವುದೇ ರೀತಿಯ ವ್ಯತ್ಯಾಸವಾಗದಂತೆ ನಮೂದಿಸಬೇಕು. ಇಲ್ಲವಾದಲ್ಲಿ ಟೆಂಡರ್‌ಗಳನ್ನು ಪರಿಗಣಿಸಲಾಗುವುದಿಲ್ಲ.
11. ಈ ಕಾಮಗಾರಿಗಳಿಗೆ ಕಾರ್ಯಾದೇಶದ ನೀಡಿದ ದಿನಾಂಕದಿಂದ 24 ಗಂಟೆಗಳೊಳಗಾಗಿ ಖಡ್ಡಾಯವಾಗಿ ಕಾಮಗಾರಿ ಪ್ರಾರಂಭಿಸತಕ್ಕದ್ದು.
12. ಸದರಿ ಕೆಲಸ ನಿರ್ವಹಿಸುವ ಸಂದರ್ಭದಲ್ಲಿ ಯಾವುದೇ ವಿದ್ಯುತ್ ಅವಘಡಗಳಿಂದ ಅಪಘಾತಗಳು ಉಂಟಾದಲ್ಲಿ / ಪ್ರಾಣ ಹಾನಿ ಉಂಟಾದಲ್ಲಿ ನಗರಸಭೆ ಜವಾಬ್ದಾರರಾಗಿರುವುದಿಲ್ಲ.
13. ಹೆಚ್ಚಿನ ಮಾಹಿತಿಗಾಗಿ ವೆಬ್‌ಸೈಟ್: www.tumkurcity.gov.in ಹಾಗೂ ನಗರಸಭೆ ತಾಂತ್ರಿಕ ಶಾಖೆಯಲ್ಲಿ ಕಛೇರಿ ವೇಳೆಯಲ್ಲಿ ಪಡೆಯಬಹುದು.

| | | |
|---|---|---|
| ಸಹಿ/– | ಸಹಿ/– | ಸಹಿ/– |
| **ಅಧ್ಯಕ್ಷರು** | **ಉಪಾಧ್ಯಕ್ಷರು** | **ಪೌರಾಯುಕ್ತರು** |
| **ನಗರಸಭೆ, ತುಮಕೂರು.** | **ನಗರಸಭೆ, ತುಮಕೂರು** | **ನಗರಸಭೆ, ತುಮಕೂರು.** |